**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ವಿರಾಜಪೇಟೆ**

**ಸಿ.ಸಿ.336/2023**

| **ಪಿರ್ಯಾದುದಾರರು** | **ವಿರುದ್ಧ** | **ಆರೋಪಿ** |
|---|---|---|
| ವಿರಾಜಪೇಟೆ ನಗರ ಪೊಲೀಸ್ ಠಾಣೆ | | ಪಟ್ಟಡ ಸಿ.ವಿಕ್ರಂ |

**:: ಆಪಾಧನೆ ::**

**ಶ್ರೀ ಸಂತೋಷ ಕೊಠಾರಿ, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,ವಿರಾಜಪೇಟೆ, ಆದ ನಾನು ನಿನ್ನ ಮೇಲೆ ಅಂದರೆಃ**

ಪಟ್ಟಡ ಸಿ.ವಿಕ್ರಂ, ತಂದೆಃ ಪೌತಿ ಪಿ.ಕೆ ಚೆಂಗಪ್ಪ, 41 ವರ್ಷ,
ವಾಸಃ ಆರ್ಜಿ ಗ್ರಾಮ, ವಿರಾಜಪೇಟೆ ತಾಲ್ಲೂಕು.

**ಈ ಕೆಳಗಿನಂತೆ ಆಪಾಧನೆ ಹೊರೆಸಿದ್ದೇನೆಃ**

ದಿನಾಂಕ 21.02.2023 ರಂದು ಬೆಳಿಗ್ಗೆ 9.45 ಗಂಟೆಗೆ ವಿರಾಜಪೇಟೆ ನಗರ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಆರ್ಜಿ ಗ್ರಾಮದ ಆರೋಪಿರವರ ಕಾಫಿ ತೋಟದಲ್ಲಿ ಅಂಜು @ ಜೋಗಿ ಯವರೊಂದಿಗೆ ಸಾಕ್ಷಿ-2 ರವರು ಒಳ್ಳೆ ಮೆಣಸು ಕುಯ್ಯಲೆಂದು ಮರವನ್ನು ಹತ್ತಿದ್ದು, ಆರೋಪಿಯಾದ ನೀವು ಸುರಕ್ಷತಾ ಕ್ರಮ ಕೈಗೊಳ್ಳದೆ ನಿರ್ಲಕ್ಷ್ಯ ವಹಿಸಿದ್ದರಿಂದ, ಸದರಿ ಅಂಜು @ ಜೋಗಿ ಹಾಗೂ ಚಾಸಾ-2 ರವರು ಹತ್ತಿದ್ದ ಮರವು ಒಣಗಿದ ಮರವಾಗಿದ್ದರಿಂದ ಬುಡದಿಂದ ಬೇರ್ಪಟ್ಟು ತುಂಡಾಗಿ ಬೀಳುವಾಗ ಮರದ ಮೇಲಿದ್ದ ಅಂಜು @ ಜೋಗಿ ಹಾಗೂ ಸಾಕ್ಷಿ-2 ರವರು ಮರದಿಂದ ಕೆಳಗೆ ನೆಲಕ್ಕೆ ಬಿದ್ದಿದ್ದು, ಅಂಜು @ ಜೋಗಿ ಯವರ ತಲೆಗೆ ಪೆಟ್ಟಾಗಿ ವಿರಾಜಪೇಟೆ ಸರ್ಕಾರಿ ಆಸ್ಪತ್ರೆಯಲ್ಲಿ ಬೆಳಿಗ್ಗೆ 11.20 ಗಂಟೆಗೆ ಮೃತಪಟ್ಟಿದ್ದು, ಆ ಮೂಲಕ ಆರೋಪಿಯಾದ ನೀವು ಭಾ.ದಂ.ಸಂ.ಕಲಂ 304 ಎ ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಎಸಗಿರುತ್ತೀರಿ ಎಂಬುದಾಗಿದೆ.

ಎರಡನೇಯದಾಗಿ ಮೇಲೆ ಹೇಳಿದ ಸಮಯ, ಸ್ಥಳ, ದಿನಾಂಕದಂದು ಆರೋಪಿಯಾದ ನಿಮ್ಮ ಕಾಫಿ ತೋಟದಲ್ಲಿ ಅಂಜು @ ಜೋಗಿ ಯವರೊಂದಿಗೆ ಸಾಕ್ಷಿ-2 ರವರು ಒಳ್ಳೆ ಮೆಣಸು ಕುಯ್ಯಲೆಂದು ಮರವನ್ನು ಹತ್ತಿದ್ದು, ಆರೋಪಿಯಾದ ನೀವು ಮೇಲೆ ತಿಳಿಸಿರುವಂತೆ ಸುರಕ್ಷತಾ ಕ್ರಮ ಕೈಗೊಳ್ಳದೆ ನಿರ್ಲಕ್ಷ್ಯ ವಹಿಸಿದ್ದರಿಂದ, ಸದರಿ ಅಂಜು @ ಜೋಗಿ ಹಾಗೂ ಚಾಸಾ-2 ರವರು ಹತ್ತಿದ್ದ ಮರವು ಒಣಗಿದ ಮರವಾಗಿದ್ದರಿಂದ ಬುಡದಿಂದ ಬೇರ್ಪಟ್ಟು ತುಂಡಾಗಿ ಬೀಳುವಾಗ ಮರದ ಮೇಲಿದ್ದ ಅಂಜು @ ಜೋಗಿ ಹಾಗೂ ಸಾಕ್ಷಿ-2 ರವರು ಮರದಿಂದ ಕೆಳಗೆ ನೆಲಕ್ಕೆ ಬಿದ್ದಿದ್ದು, ಸಾಕ್ಷಿ-2 ರವರಿಗೆ ಸಾಮಾನ್ಯ ಸ್ವರೂಪದ ಗಾಯಪಡಿಸಿದ್ದು, ಆ ಮೂಲಕ ಆರೋಪಿಯಾದ ನೀವು ಭಾ.ದಂ.ಸಂ.ಕಲಂ 337 ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆ ಯದೊಳಗೆ ಎಸಗಿರುತ್ತೀರಿ ಎಂಬುದಾಗಿದೆ.

ಮೇಲಿನ ಆರೋಪಗಳಿಗೆ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗುವಂತೆ ನಿಮಗೆ ನಿರ್ದೇಶಿಸಲಾಗಿದೆ.

ಪ್ರ–1: ಮೇಲಿನ ದೋಷಾರೋಪಣೆಯನ್ನು ಓದಿ, ತಿಳಿಸಿ ಹೇಳಿದ್ದು, ನಿಮಗೆ ಅರ್ಥವಾಗಿದೆಯೆ?

ಉತ್ತರಃ

ಪ್ರ–2: ನೀವು ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೆಂದು ಇಚ್ಛಿಸುತ್ತೀರೋ?

ಉತ್ತರಃ

(ಮೇಲಿನ ಆಪಾಧನೆಯನ್ನು ಆರೋಪಿಗೆ ಓದಿ, ತಿಳಿಸಿ ಹೇಳಿದ ನಂತರ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಳ್ಳಲಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ).

ದಿನಾಂಕ 29 ನೇ ಫೆಬ್ರವರಿ ಮಾಹೆ 2024.

ಸಹಿಃ

**(ಸಂತೋಷ ಕೊಠಾರಿ)**

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾ.ದಂ., ವಿರಾಜಪೇಟೆ.

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ವಿರಾಜಪೇಟೆ**

**ಸಿ.ಸಿ.637/2012**

**ಪಿರ್ಯಾದುದಾರರು ವಿರುದ್ಧ ಆರೋಪಿತರು**

ಸಿದ್ಧಾಪುರ ಪೊಲೀಸ್ ಠಾಣೆ ಚೌರೀರ ರವಿ ಕಾರ್ಯಪ್ಪ ಮತ್ತೊಬ್ಬರು

**:: ಆ ಪಾ ದ ನೆ ::**

**ಶ್ರೀ ಸಂತೋಷ ಕೊಠಾರಿ, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,ವಿರಾಜಪೇಟೆ, ಆದ ನಾನು ನಿನ್ನ ಮೇಲೆ ಅಂದರೆಃ**

2) ಅಚ್ಚಕಾಳೇರ ಕಾವೇರಪ್ಪ @ ಸುರೇಶ, ತಂದೆಃ ಪೌತಿ ಕಾಳಪ್ಪ, 35 ವರ್ಷ,
ತೋಟದ ರೈಟರ್, ಕನ್ನಡ ಮಠ, ಹೊಸೂರು, ಬೆಟ್ಟಗೇರಿ ಗ್ರಾಮ,
ವಿರಾಜಪೇಟೆ. ಕಟ್ಟೆಮಾಡು,
ಕೊಡಗು.

ಪ್ರ-1: ಮೇಲಿನ ದೋಷಾರೋಪಣೆಯನ್ನು ಓದಿ, ತಿಳಿಸಿ ಹೇಳಿದ್ದು, ನಿಮಗೆ ಅರ್ಥವಾಗಿದೆಯೆ?

ಉತ್ತರಃ

ಪ್ರ-2: ನೀವು ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೆಂದು ಇಚ್ಛಿಸುತ್ತೀರೋ?

ಉತ್ತರಃ

(ಮೇಲಿನ ದೋಪಾರೋಪಣೆಯನ್ನು ಆರೋಪಿಗಳಿಗೆ ಓದಿ, ತಿಳಿಸಿ ಹೇಳಿದ ನಂತರ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಳ್ಳಲಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ).

5 ನೇ ಆಗಸ್ಟ್ ಮಾಹೆ 2023.

**(ಸಂತೋಷ ಕೊಠಾರಿ)**

ಪ್ರಧಾನ   ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ವಿರಾಜಪೇಟೆ.